**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ</u>**

ಸಿ.ಸಿ. ನಂ.658/2021

ಸಿ.ಡಬ್ಲೂ: 4 ಪಿ.ಡಬ್ಲೂ: 3

ಹೆಸರುಃ ಮಂಜುನಾಥ

ತಂದೆಯ ಹೆಸರುಃ ಮಾರುತಿ ಚಿತ್ರಗಾರ

ವಯಸ್ಸುಃ 34 ವರ್ಷ

ಉದ್ಯೋಗಃ ಗ್ಯಾಸ್ ಏಜೆನ್ಸಿಯಲ್ಲಿ ಕಂಪ್ಯೂಟರ್ ಅಪರೇಟರ್

ವಿಳಾಸಃ ಗಜೇಂದ್ರಗಡ

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 08/01/2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ</u>**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತಿಲ್ಲ. ಚಾಸಾ–1 ರವರು ಗೊತ್ತು. ನಾನು ಯಾವುದೇ ಘಟನೆಯನ್ನು ನೋಡಿಲ್ಲ. ಚಾಸಾ–1 ಇವರ ಜೊತೆ ನಾನು ಪೊಲೀಸ್ ಠಾಣೆಗೆ ಹೋಗಿದ್ದೆ. ಆ ಸಮಯದಲ್ಲಿ ನನ್ನನ್ನು ಸಾಕ್ಷಿಯಾಗಿ ಮಾಡಿದ್ದಾರೆ. ಚಾಸಾ–1 ನನ್ನ ಸ್ನೇಹಿತನ ತಂದೆ. ಚಾಸಾ–1 ಇವರಿಗೆ ಮೂರು ಜನ ಗಂಡು ಮಕ್ಕಳು. ಚಾಸಾ–1 ಈಗ ತೀರಿಕೊಂಡಿದ್ದಾರೆ. ನಾನು ಇದೇ ಮೊದಲ ಬಾರಿಗೆ ಆರೋಪಿಯನ್ನು ನೋಡುತ್ತಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ– ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. ದಿನಾಂಕ 02/11/2020 ರಂದು ಬೆಃ 10-00 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ಚಾಸಾ-1 ಪೋನ್ ಮಾಡಿ ಆರೋಪಿ ಗಿರೀಶ ರಾಮಚಂದ್ರ ಹುಲಕುಂದ ತನ್ನ ಹೆಂಡತಿಯೊಂದಿಗೆ ಸರಿಯಾಗಿ ಬಾಳುವೆ ಮಾಡದೇ ಇದ್ದಿದ್ದರಿಂದ ಹಾಗೂ ಆತನ ಹೆಂಡತಿ ತಮ್ಮ ಸಂಬಂಧಿಕಳಿದ್ದು, ಈಗ ಬೇರೆ ವಾಸವಾಗಿದ್ದಾರೆ ಎಂದು ಹೇಳಿದ್ದು, ಹಾಗೂ ಆತನಿಗೆ ಚಾಸಾ-1 ತಿಳುವಳಿಕೆ ಹೇಳಿದ್ದಾಗಿ ಹಾಗೂ ಆರೋಪಿ ಅದನ್ನೇ ಮನಸ್ಸಿ ನಲ್ಲಿ ಇಟ್ಟುಕೊಂಡು ಆಗಾಗ ಚಾಸಾ-1 ರವರಿಗೆ ಅವಾಚ್ಯವಾಗಿ ಬೈಯುವುದನ್ನು ಮಾಡುತ್ತಿದ್ದಾ ಎಂದು ನನಗೆ ಚಾಸಾ-1 ಹೇಳಿದರು ಎಂದರೆ ಸರಿಯಲ್ಲ. ದಿನಾಂಕ 06/05/2020 ರಂದು ಆರೋಪಿ ತನ್ನ ಮೊಬೈಲ್ ನಂಬರನಿಂದ ಚಾಸಾ-1 ಇವರ ಮೊಬೈಲ್ ಗೆ ಪೋನ್ ಮಾಡಿ ನಾಯಿ ಎಂದು ಬೈದು, ನಿನ್ನ ಒಂದು ಕೈ ನೋಡಿಕೊಳ್ಳುತ್ತೇನೆ ಎಂದು ಮೇಸೆಜ್ ಮಾಡಿ ಅವರಿಗೆ ಮಾನಸಿಕ ಹಿಂಸೆ ಕೊಟ್ಟಿದ್ದಾ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಸ.ಸ.ಅ. ರವರು ಆತನ ಹೇಳಿಕೆಯ ಭಾಗವನ್ನು ಓದಿ ಹೇಳಿರುತ್ತಾರೆ. ಸಾಕ್ಷಿ ಅದನ್ನು ತಿಳಿದುಕೊಂಡು ಅದನ್ನು ತಾನು ಪೋಲಿಸರ ಮುಂದೆ ನೀಡಿಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿ ಒಪ್ಪದ ಹೇಳಿಕೆಯ ಭಾಗವಾದ "ದಿನಾಂಕ 02/11/2020....... ಹೇಳಿದ್ದು ಇರುತ್ತದೆ" ಇದನ್ನು ನಿಪಿಃ 2 ಎಂದು ಗುರುತಿಸಲಾಯಿತು.

2. ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರು ಏನು ಇಲ್ಲಾ ಎಂದು ಹೇಳುತ್ತಾರೆ.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ .